**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ**

**CC.No.128/2019**

**CW : 09 PW: 07**

**ವಿ.ಸಿ.ಯ ಮುಖಾಂತರ ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು**
**ದಿನಾಂಕ : 31.12.2025**

| | |
|---|---|
| ಹೆಸರು | : ಮಹಾಂತೇಶ ಸಜ್ಜನ |
| ತಂದೆಯ ಹೆಸರು | : ಈರಪ್ಪ ಸಜ್ಜನ |
| ವಯಸ್ಸು | : 41 |
| ಉದ್ಯೋಗ | : ಡಿ.ವೈ.ಎಸ್.ಪಿ, ಗದಗ |
| ವಾಸಸ್ಥಳ | : ಗದಗ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು ಶಹಾಬಾದ ನಗರ ಠಾಣೆಯಲ್ಲಿ ಸಿ.ಪಿ.ಐ ಎಂದು 12/03/2019 ರಿಂದ 12/06/2019 ರವರೆಗೆ ಕರ್ತವ್ಯ ನಿರ್ವಹಿಸಿದ್ದೇನೆ. ಈ ಕಡತವನ್ನು ನಾನು ಚಾಸಾ-8 ರಿಂದ ಪಡೆದುಕೊಂಡು ಮುಂದಿನ ತನಿಖೆ ಮಾಡಿರುತ್ತೇನೆ. ಸದರಿ ಚಾಸಾ-8 ಇವರ ತನಿಖೆ ಆಧಾರದ ಮೇಲೆ ನಾನು ಸಾಕ್ಷಷ್ಟು ಸಾಕ್ಷ್ಯಾಧಾರಗಳು ಇರುವ ಕಾರಣ ಆರೋಪಿತರ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ**

ನಾನು ಚಾಸಾ-8 ಇವರಿಂದ ಕಡತವನ್ನು ಪಡೆದುಕೊಳ್ಳದೇ ಯಾವುದೇ ತನಿಖೆಯನ್ನು ಕೈಗೊಳ್ಳದೇ ಒಂದು ಖೊಟ್ಟಿ ದೋಷಾರೋಪಣೆ ಪಟ್ಟಿಯನ್ನು ಆರೋಪಿತರ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಚಾಸಾ-8 ಇವರ ಮಾತಿನ ಮೇರೆಗೆ ಈ ದೋಷಾರೋಪಣೆ ಪಟ್ಟಿ ತಯಾರಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಡೆದ ಪ್ರಕರಣದ ಬಗ್ಗೆ ಮಾಹಿತಿ ಇಲ್ಲದಿದ್ದರೂ ನಾನು ಚಾಸಾ-1 ಇವರಿಗೆ ಸಹಾಯ ಮಾಡುವ ಉದ್ದೇಶದಿಂದ ಈ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**